The percentage of S.C. and S.T. Officials in G.A.D.

563. Sri M. H. JAYAPRAKASH NARAYAN (Sirsi).—

Will the Chief Minister be pleased to state :—

(*a*) the number of officials both gazetted and non-gazetted in all categories of posts in General Administration Department, Government of Mysore at present ;

(*b*) the number of officials belonging to Scheduled Castes and Scheduled Tribes in all categories of posts now in General Administration Department, Government of Mysore at present and their percentage in each categories as against officials in clause (*a*) ;

(*c*) the steps taken by the Government to keep up the percentage of 15 and 3 to Scheduled Caste and Scheduled Tribes respectively in the General Administration Department ?

Sri VEERENDRA PATIL (Chief Minister).—

(*a*) *Class I*	*Class II*	*Class III*	*Class IV*
15	24	190	240
(*b*) S. C. nil	nil	8—4.4%	53—22%
S. T. nil	nil	nil	7—3%

(*c*) For purposes of recruitment, Mysore Government Secretariat as a whole comprising the various administrative Departments is one unit and as such, the question of securing the percentage of reservation in a particular Department like General Administration Department does not arise.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಜ್ಯಾಂಗವನ್ನು ಜಾರಿಗೆ ತಂದು ಸುಮಾರು 18 ವರ್ಷಗಳಾದುವು. ಅದರ ಪ್ರಕಾರ ಹರಿಜನ ಗಿರಿಜನರಿಗೆ ಕೆಲವು ರಿಯಾಯಿತಿಗಳಿಗೆ ಅವಕಾಶವಿದ್ದು ಅವರಿಗೆ ಉದ್ಯೋಗಗಳಲ್ಲಿ ರಿಸರ್ವೇಷನ್ ಕೆ ಡಬೇಕೆಂದಿದೆ. ನಾನು ಅದಕ್ಕೆ ಸಂಬಂಧಪಟ್ಟ ಹಾಗೆ ಉತ್ತರ ಕೇಳಿದರೆ ಕ್ಲಾಸ್ 1 ಮತ್ತು 2 ರಲ್ಲಿ, ಇಲ್ಲ, ಇಲ್ಲ ಎಂದು ಹೇಳಿದ್ದಾರೆ. ಇದೆ, ಇದೆ, ಎಂದು ಯಾವಾಗ ಉತ್ತರ ಹೇಳುತ್ತಾರೆ !

† ಶ್ರೀ ವೀರೇಂದ್ರ ಪಾಟೀಲ್.—ಗವರ್ನಮೆಂಟ್ ಸೆಕ್ರೆಟೇರಿಯಟ್ ಅಂದಮೇಲೆ ಅದರಲ್ಲಿ ಅನೇಕ ಡಿಪಾರ್ಟ್‌ಮೆಂಟ್ಸ್ ಇರುತ್ತವೆ. ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿಯೂ ರಿಸರ್ವೇಷನ್ ಎಂದು ಮಾಡಲಿಕ್ಕೆ ಆಗುವುದಿಲ್ಲ. ಯಾವಾಗ ರಿಕ್ರೂಟ್‌ಮೆಂಟ್ ಮಾಡುತ್ತೇವೆ ಆವಾಗ ರಿಸರ್ವೇಷನ್ ಪ್ರಶ್ನೆ ಬರುತ್ತದೆ. ರಿಕ್ರೂಟ್‌ಮೆಂಟ್ ಆದಮೇಲೆ ಅವರಿಗೆ ಅನೇಕ ಡಿಪಾರ್ಟ್‌ಮೆಂಟ್‌ಗಳಿಗೆ ಕಳಿಸುತ್ತೇವೆ. ಜಿ.ಎ.ಡಿ. ಯಲ್ಲಿ ಕೆಲವರು, ಇಂಡಸ್ಟ್ರೀಸ್, ಕಾಮರ್ಸ್‌ನಲ್ಲಿ ಕೆಲವರು ಹೀಗೆ ಎಷ್ಟು ಡಿಪಾರ್ಟ್‌ಮೆಂಟ್‌ಗಳಿವೆಯೋ ಅಷ್ಟು ಸೆಕ್ರೆಟೇರಿಯಟ್‌ಗಳಿವೆ. ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲಿಯೂ ಕೋಟಾ ಪ್ರಕಾರ ಕಳಿಸುವುದಕ್ಕಾಗುವುದಿಲ್ಲ, ಹಾಗೆ ಮಾಡುವುದಕ್ಕೂ ಆಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮುಖ್ಯ ಮಂತ್ರಿಗಳು ನಿಯೆಮಾವಳಿಯನ್ನು ಮುಂದೊಡ್ಡಿ ಹೇಳುತ್ತಿದ್ದಾರೆ. ಆದರೆ ಈ 20 ವರ್ಷಗಳಲ್ಲಿ ಶಾಸನಬದ್ಧವಾಗಿ, ಕ್ರಮಬದ್ಧವಾಗಿ ಆ ಸ್ಥಾನದಲ್ಲಿ ಕೆಲಸ ಮಾಡುವುದಕ್ಕೆ ಯೋಗ್ಯರಾಗಿರತಕ್ಕವರನ್ನು, ಅರ್ಹರಾಗಿರತಕ್ಕವರನ್ನು ತಯಾರು ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ವೀರೇಂದ್ರ ಪಾಟೀಲ್.—ಅದು ಮತ್ತೊಂದು ಪ್ರಶ್ನೆಯಾಯಿತು. ಈಗ ಇರುವ ಪ್ರಶ್ನೆ ಜಿ.ಎ.ಡಿ. ಯಲ್ಲಿ ಎಷ್ಟು ಜನ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ಜನರಿದ್ದಾರೆ ಎನ್ನುವುದು. ಅವರಿಗೆ ಅರ್ಹತೆ ಬರುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದು ಪ್ರತ್ಯೇಕ ಪ್ರಶ್ನೆಯಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ನಿರ್ಗತಿಕ ಜನಾಂಗ ಎಲ್ಲ ವಿಧದಲ್ಲಿಯೂ ಪ್ರಗತಿಗೆ ಬರಬೇಕಾದರೆ ಅವರಿಗೆ ಸ್ಥಾನಮಾನಗಳೇ ಅಲ್ಲದೆ ಬೇರೆ ರೀತಿಯಲ್ಲಿಯೂ ಅವಕಾಶ ಕೊಡಬೇಕು. ಜಿ.ಎ.ಡಿ. ಮಾತ್ರವಲ್ಲದೆ ಎಲ್ಲ ಕಡೆಯೂ ಒದಗಿಸಿಕೊಡಬೇಕು. ಜಿ.ಎ.ಡಿ. ಮತ್ತು ಇತರ ಕಡೆ ಅರ್ಹರಾಗಿರತಕ್ಕ ಅಧಿಕಾರಿಗಳನ್ನು ಪೋಸ್ಟ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಎಷ್ಟೋ ಜನರು ಹುದ್ದೆಗಳಲ್ಲಿದ್ದಾರೆ, ಎರಾ್ಲ ಕಡೆಯೂ ಪೋಸ್ಟ್ ಮಾಡಲು ಪ್ರಯತ್ನಮಾಡಲಾಗುತ್ತಿದೆ. ಆದರೆ ಇಲಾಖಾವಾರು ಮಾಡಿ, ಪ್ರತಿಯೊಂದು ಇಲಾಖೆಯಲ್ಲೂ ಅವಕಾಶ ಕೊಡಿ ಎಂದರೆ ಹಾಗೆ ಪೋಸ್ಟ್ ಮಾಡುವುದು ಕಷ್ಟವಾಗುತ್ತದೆ. ಆದುದರಿಂದ ಸೆಕ್ರೆಟೇರಿಯಟ್ ಒಂದು ಯೂನಿಟ್ ಎಂದು ಮಾಡಿ ಅದರ ಪ್ರಕಾರ ಕೆಲಸಕಾರ್ಯ ನಡೆಯುತ್ತಿದೆ. ಇನ್ನೂ ಹೆಚ್ಚು ಜನ ನರಕಾರದ ಹುದ್ದೆಗಳಲ್ಲಿ ಸ್ಥಾನ ಪಡೆಯಬೇಕು ಅಂದರೆ ರೆಕ್ರೂಟ್‌ಮೆಂಟಿನಲ್ಲಿ ರಿನರ್ವೇಷನ್ ಪೂರ್ಣವಾಗಿ ಸಿಕ್ಕುವ ಹಾಗೆ ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಕ್ಲಾಸ್ ಒಂದು ಮತ್ತು ಕ್ಲಾಸ್ ಎರಡರಲ್ಲಿ ಯಾರೂ ಇಲ್ಲ ಎಂದು ಉತ್ತರ ಕೊಡರಾಗಿದೆ. ಮುಂದಾದರೂ ಅಲ್ಲಗೆ ಬೇರೆ ಕ್ಯಾಸ್ಟ್‌ನವರನ್ನು ಪೋಸ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಗೆ ಪೋಸ್ಟ್ ಮಾಡಿದರೆ ಇನ್ನೊಂದು ಕಡೆ ಇಲ್ಲ ಎಂದು ಪ್ರಶ್ನೆ ಹಾಕಬಹುದು. ಆದುದರಿಂದ ಸೆಕ್ರೆಟೇರಿಯಟ್ ಒಂದು ಯೂನಿಟ್ ಎಂದು ಪರಿಗಣಿಸ ಬೇಕಾಗುತ್ತದೆ. ಹಾಗೆ ಹೇಳಿದಮೇಲೆ ಸೆಕ್ರೆಟೇರಿಯೆಟ್‌ನಲ್ಲಿ ಯಾರಿದ್ದಾರೆ ಎಂಬ ಪ್ರಶ್ನೆಗೆ ಅವಕಾಶವಿರುವುದಿಲ್ಲ. ಎಲ್ಲಿ ಬೇಕಾದರೂ ಇರಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೆಕ್ರೆಟೇರಿಯಟ್ ಪೂರ್ಣವಾಗಿ ತೆಗೆದುಕೊಂಡರೆ ಒಂದನೆಯ ದರ್ಜೆಯಿಂದ ನಾಲ್ಕನೆಯ ದರ್ಜೆಯವರೆಗೆ ಇರುವ ಹುದ್ದೆಗಳಿಗೆ ಪರ್ಸೆಂಟೇಜ್ ಎಷ್ಟಿರಬೇಕೋ ಅದರ ಪ್ರಕಾರ ರಿನರ್ವ್ ಮಾಡರಾಗುವುದೇ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತ್ಯೇಕ ಪ್ರಶ್ನೆ ಅದಕ್ಕೆ ಹಾಕಬೇಕು, ಇದು ಜಿ.ಎ.ಡಿ. ಗೆ ಮಾತ್ರ ಸಂಬಂಧಪಟ್ಟಿದೆ. ಅದಕ್ಕೆ ಸಂಬಂಧಪಟ್ಟಂತೆ ಮಾತ್ರ ಉತ್ತರ ಹೇಳಿದೆ.

Sri D. B. KALMANKAR.—May I know whether the employees in the Secretariat are there from the beginning or new recruitment has taken place ?

Sri VEERENDRA PATIL.—So far as my knowledge goes, in the Secretariat, Section Officers Class II and Class I posts are promotion posts and there is no direct recruitment. The direct recruitment is only for II Division Clerks and I Division Clerks in the Secretariat and later on by promotion they become Section Officers ; Section Officers become Under Secretaries and Under Secretaries become Deputy Secretaries.